ಕರ್ನಾಟಕ ವಿಧಾನ ಪರಿಷತ್ತು

140ನೇ ಅಧಿವೇಶನ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	629 (813)
ಮಾನ್ಯ ಸದಸ್ಯರ ಹೆಸರು	:	ಶ್ರೀ ಹೆಚ್.ಎಂ. ರೇವಣ್ಣ (ವಿಧಾನಸಭಾ ಕ್ಷೇತ್ರದಿಂದ ಚುನಾಯಿತರಾದವರು)
ಉತ್ತರಿಸುವ ದಿನಾಂಕ	:	11-03-2020
ಉತ್ತರಿಸುವ ಸಚಿವರು	:	ಮಾನ್ಯ ಉಪಮುಖ್ಯಮಂತ್ರಿಗಳು, (ಲೋಕೋಪಯೋಗಿ ಮತ್ತು ಸಮಾಜ ಕಲ್ಯಾಣ ಇಲಾಖೆ)

ಕ್ರ. ಸಂ.	ಪ್ರಶ್ನೆ	ಉತ್ತರಗಳು
(ಅ)	ಬೆಂಗಳೂರು-ಮಾಗಡಿ ಚತುಷ್ಪಥ ರಸ್ತೆ ಕಾಮಗಾರಿಯು ಕೆಶಿಪ್‌ನಲ್ಲಿ ಮಂಜೂರಾಗಿದ್ದು, ಇಲ್ಲಿಯವರೆಗೆ ಕಾಮಗಾರಿ ಪ್ರಾರಂಭವಾಗದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಬಂದಿದೆ.
ಆ)	ಈ ಕಾಮಗಾರಿಯು ಪೂರ್ಣಗೊಳ್ಳಲು ಎಷ್ಟು ಕಾಲಾವಕಾಶ ಬೇಕಾಗಿರುತ್ತದೆ; ಈ ಯೋಜನೆಗೆ ತಲಗುವ ಅಂದಾಜು ವೆಚ್ಚವೆಷ್ಟು;	ಬೆಂಗಳೂರು-ಮಾಗಡಿ ಚತುಷ್ಪಥ ರಸ್ತೆ ಕಾಮಗಾರಿಯು ಗುತ್ತಿಗೆ ಕರಾರಿನಂತೆ ಕಾಮಗಾರಿ ಪೂರ್ಣಗೊಳಿಸಲು ಕಾಮಗಾರಿಯ ನೇಮಕ ದಿನಾಂಕ (Appointed Date) ದಿಂದ 24 ತಿಂಗಳುಗಳ ಅವಧಿಯನ್ನು ನಿಗದಿಪಡಿಸಲಾಗಿದೆ. ಸದರಿ ಪ್ಯಾಕೇಜಿನ ಯೋಜನಾ ಅಂದಾಜು ಮೊತ್ತ (Estimated Project cost) ರೂ. 895.00 ಕೋಟಿಗಳು ಮತ್ತು ಗುತ್ತಿಗೆ ಮೊತ್ತ (Bid Cost) ರೂ. 1062.00 ಕೋಟಿಗಳು.
ಇ)	ಈ ಕಾಮಗಾರಿಯು ವಿಳಂಬವಾಗುವುದಕ್ಕೆ ಕಾರಣವೇನು? (ಪೂರ್ಣ ವಿವರ ನೀಡುವುದು)	ಸದರಿ ರಸ್ತೆಯ ಗುತ್ತಿಗೆ ಕರಾರಿನಂತೆ ಕೆಶಿಪ್‌ನಿಂದ ಪೂರ್ವಭಾವಿ ಸಿದ್ಧತೆಗಳಾದ ಭೂಸ್ವಾಧೀನ ಪ್ರಕ್ರಿಯೆ, ಅರಣ್ಯ ಇಲಾಖೆಯಿಂದ ಅನುಮತಿ ಪಡೆಯುವುದು, ಮರಗಳ ಕಟಾವಣೆ ಅನುಮತಿ ಮತ್ತು ಇತರೇ ಪೂರ್ವಭಾವಿ ಸಿದ್ಧತೆಗಳನ್ನು ಪೂರೈಸುವ ಹಂತದಲ್ಲಿದೆ. ಇದೇ ರೀತಿ ರಿಯಾಯತಿದಾರರಾದ ಮೆ: ಕೆಎನ್ ಹೈವೇಸ್ ರವರಿಂದ Financial Closure ಮತ್ತು ಇತರೇ ಪೂರ್ವಭಾವಿ ಸಿದ್ಧತೆಗಳನ್ನು ಪೂರೈಸಬೇಕಾಗಿದೆ. ಇದರಲ್ಲಿನ restructuring ಪ್ರಸ್ತಾವನೆಗಾಗಿ ಏಷಿಯನ್ ಅಭಿವೃದ್ಧಿ ಬ್ಯಾಂಕ್‌ನ ಅನುಮೋದನೆ ಬಾಕಿ ಇರುತ್ತದೆ. ಸದರಿ ಪ್ರಸ್ತಾವನೆಗೆ ಅನುಮೋದನೆ ದೊರೆತ ಕೂಡಲೇ ಹಾಗೂ ಗುತ್ತಿಗೆ ಕರಾರಿನಂತೆ ಕೆಶಿಪ್ ಮತ್ತು

		ಗುತ್ತಿಗೆದಾರರಿಂದ ಸದರಿ ಪೂರ್ವಭಾವಿ ಸಿದ್ಧತೆಗಳು ಮತ್ತು ಷರತ್ತು ಪೂರೈಸಿದ ನಂತರ ನೇಮಕ ದಿನಾಂಕವನ್ನು ಘೋಷಿಸಲಾಗುವುದು. ಪ್ರಸ್ತುತವಾಗಿ ರಸ್ತೆ ಕಾಮಗಾರಿಯು ಅಭಿವೃದ್ಧಿ ಅವಧಿಯಲ್ಲಿದೆ. ಶೀಘ್ರವಾಗಿ ಕಾರ್ಯಗತಗೊಳಿಸಲಾಗುವುದು.

ಸಂಖ್ಯೆ:ಲೋಇ E-45 ಇಎಪಿ 2020

(ಗೋವಿಂದ ಎಂ. ಕಾರಜೋಳ)
ಮಾನ್ಯ ಉಪಮುಖ್ಯಮಂತ್ರಿಗಳು,
(ಲೋಕೋಪಯೋಗಿ ಹಾಗೂ ಸಮಾಜ ಕಲ್ಯಾಣ ಇಲಾಖೆ)